All India Radio: Bangalore
National Bulletin In Kannada
28.09.2025  19.35 p.m.
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

- ಸ್ವದೇಶಿ ಖರೀದಿಯ ಮೂಲಕವೇ ಭಾರತ ಆತ್ಮನಿರ್ಭರವಾಗಲು ಸಾಧ್ಯ: ಮನ್ ಕಿ ಬಾತ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ
- ನವದೆಹಲಿಯಲ್ಲಿ ನಕ್ಸಲ್ ಮುಕ್ತ ಭಾರತ್ ಕಾರ್ಯಕ್ರಮ ಸಂಪನ್ನ; ಮಾವೋವಾದಿಗಳ ನಿರ್ಮೂಲನೆಗೆ ಗೃಹ ಸಚಿವ ಅಮಿತ್ ಶಾ ಪಣ
- ತಮಿಳುನಾಡು ಕಾಲ್ತುಳಿತ ಪ್ರಕರಣ ತನಿಖೆಗೆ ಏಕಸದಸ್ಯ ಆಯೋಗ ರಚನೆ
- ಒಂದು ಲಕ್ಷ ಕೋಟಿ ರೂಪಾಯಿಗೂ ಅಧಿಕ ಹೂಡಿಕೆ ಒಪ್ಪಂದಗಳೊಂದಿಗೆ ವರ್ಲ್ಡ್ ಫುಡ್ ಇಂಡಿಯಾಗೆ ತೆರೆ
- ಏಷ್ಯಾಕಪ್ ಟಿ-೨೦ ಕ್ರಿಕೆಟ್ ಫೈನಲ್; ಪ್ರಶಸ್ತಿಗಾಗಿ ಇಂದು ಭಾರತ-ಪಾಕಿಸ್ತಾನ ಹಣಾಹಣಿ

<><><><>

ವೋಕಲ್ ಫಾರ್ ಲೋಕಲ್ ಘೋಷಣೆಯನ್ನು ತಮ್ಮ ಮಂತ್ರವಾಗಿಸಿ ಸ್ವದೇಶಿ ಉತ್ಪನ್ನಗಳನ್ನು ಹೆಚ್ಚೆಚ್ಚು ಬಳಸುವಂತೆ ಪ್ರಧಾನಿ ನರೇಂದ್ರ ಮೋದಿ ಸಮಸ್ತ ದೇಶದ ಜನತೆಗೆ ಕರೆ ನೀಡಿದ್ದಾರೆ. ಮನ್ ಕಿ ಬಾತ್‌ನ ೧೨೬ನೇ ಆವೃತ್ತಿಯಲ್ಲಿಂದು ಸಮಸ್ತ ಭಾರತೀಯರನ್ನುದ್ದೇಶಿಸಿ ಮಾತನಾಡಿದ ಅವರು, ಹಬ್ಬಗಳು ಒಂದರ ಹಿಂದೆ ಒಂದು ಬರುತ್ತಿದ್ದು, ಮತ್ತೊಂದೆಡೆ ಜಿಎಸ್‌ಟಿ ಉಳಿತಾಯ ಉತ್ಸವವು ನಡೆಯುತ್ತಿದೆ. ಈ ಸಂದರ್ಭದಲ್ಲಿ ದೇಶದಲ್ಲೇ ಉತ್ಪಾದಿಸಿದ ವಸ್ತುಗಳನ್ನು ಖರೀದಿಸುವ ಸಂಕಲ್ಪವನ್ನು ಎಲ್ಲರೂ ಕೈಗೊಳ್ಳಬೇಕು ಎಂದರು. ಹಬ್ಬದ ಸಮಯದಲ್ಲಿ ಸ್ವಚ್ಛತೆ ಮನೆಗಳಿಗೆ ಮಾತ್ರ ಸಮೀತವಾಗದೇ ಬೀದಿ, ಬಡಾವಣೆ, ಮಾರುಕಟ್ಟೆ ಮತ್ತು ಹಳ್ಳಿಗಳವರೆಗೂ ವಿಸ್ತರಿಸಬೇಕು ಎಂದರು. ನವರಾತ್ರಿಯ ಸಂದರ್ಭದಲ್ಲಿ ಶಕ್ತಿರೂಪಿಣಿ ದೇವಿಯನ್ನು ಎಲ್ಲರೂ ಆರಾಧಿಸುತ್ತಾರೆ ಎಂದ ಅವರು, ದೇಶದ ಪುತ್ರಿಯರೂ ವ್ಯಾಪಾರದಿಂದ ಕ್ರೀಡೆ, ಶಿಕ್ಷಣ, ವಿಜ್ಞಾನ ಸೇರಿದಂತೆ ಎಲ್ಲ ಕ್ಷೇತ್ರಗಳಲ್ಲಿ ತಮ್ಮ ಛಾಪು ಮೂಡಿಸುತ್ತಿದ್ದಾರೆ ಎಂದು ಹರ್ಷ ವ್ಯಕ್ತಪಡಿಸಿದರು. ಈ ವೇಳೆ ಅವರು,

ಭಾರತೀಯ ನೌಕಾಪಡೆಯ ಲೆಫ್ಟಿನೆಂಟ್ ಕಮಾಂಡರ್ ದಿಲ್ನಾ ಮತ್ತು ರೂಪಾ ಅವರ ಸಾಧನೆಯನ್ನು ವಿಶೇಷವಾಗಿ ಉಲ್ಲೇಖಿಸಿದರು. ಸ್ವಾತಂತ್ರ್ಯ ಹೋರಾಟಗಾರ ಭಗತ್‌ಸಿಂಗ್ ಹಾಗೂ ತಮ್ಮ ಮಧುರ ಕಂಠದಿಂದ ಕಲಾ ರಸಿಕರ ಮನದಲ್ಲಿ ಸದಾ ಹಸಿರಾಗಿರುವ ಭಾರತರತ್ನ ಪುರಸ್ಕೃತೆ ಲತಾ ಮಂಗೇಶ್ಕರ್ ಅವರ ಜನ್ಮ ವಾರ್ಷಿಕೋತ್ಸವದ ಅಂಗವಾಗಿ ಅವರನ್ನು ಮನದ ಮಾತಿನಲ್ಲಿ ಪ್ರಧಾನಿ ಸ್ಮರಿಸಿದರು. ಛತ್‌ಪೂಜಾ ಈಗ ಒಂದು ಜಾಗತಿಕ ಉತ್ಸವವಾಗಿ ಹೊರ ಹೊಮ್ಮುತ್ತಿದೆ. ಸರ್ಕಾರ ಛತ್ ಮಹಾಪರ್ವವನ್ನು ಯುನೆಸ್ಕೋದ ಸಾಂಸ್ಕೃತಿಕ ಪರಾಂಪರಿಕ ಪಟ್ಟಿಯಲ್ಲಿ ಸೇರಿಸಲು ಪ್ರಯತ್ನಿಸುತ್ತಿದೆ ಎಂದು ಹೇಳಿದರು. ಬರುವ ಅಕ್ಟೋಬರ್ ೨ರ ಗಾಂಧಿ ಜಯಂತಿ ಹಿನ್ನೆಲೆ ಖಾದಿ ಬಳಕೆ ಸೇರಿದಂತೆ ಸ್ವದೇಶಿ ಉತ್ಪನ್ನಗಳ ಬಳಕೆಗೆ ಉತ್ತೇಜಿಸಿದರು. ಕಳೆದ ೧೧ ವರ್ಷಗಳಲ್ಲಿ ಖಾದಿ ಕುರಿತು ಜನಾಕರ್ಷಣೆ ಬಹಳ ಹೆಚ್ಚಿದೆ ಎಂದ ಅವರು, ಪ್ರತಿಯೊಬ್ಬರು ಗಾಂಧಿಜಯಂತಿಯಂದು ಖಾದಿ ಉತ್ಪನ್ನಗಳನ್ನು ಖರೀದಿಸಿ ವೋಕಲ್ ಫಾರ್ ಲೋಕಲ್ ಹ್ಯಾಶ್‌ಟ್ಯಾಗ್‌ನೊಂದಿಗೆ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಳ್ಳುವಂತೆ ಕರೆ ನೀಡಿದ್ದಾರೆ.

ಧ್ವನಿ : ಪಿಎಂ ವೋಕಲ್ ಫಾರ್ ಲೋಕಲ್ (೨೨ ಸೆಕೆಂಡ್‌ಗಳು)

ಇದೇ ವೇಳೆ ಪ್ರಧಾನಿ, ಪರಂಪರೆ ಮತ್ತು ಹೊಸತನದ ಸಂಯೋಜನೆಯೊಂದಿಗೆ ಗ್ರಾಮೀಣ ಮಹಿಳೆಯರಿಗೆ ಮತ್ತು ಕಲಾವಿದರಿಗೆ ಬದುಕು ನೀಡುತ್ತಿರುವ ವಿವಿಧ ಸಂಸ್ಥೆಗಳನ್ನು ಉಲ್ಲೇಖಿಸಿದರು. ಈ ಬಾರಿಯ ವಿಜಯದಶಮಿಯಂದೇ ರಾಷ್ಟ್ರೀಯ ಸ್ವಯಂ ಸೇವಕ ಸಂಘ-ಆರ್‌ಎಸ್‌ಎಸ್‌ನ ಶತಮಾನೋತ್ಸವವನ್ನು ಆಚರಿಸಲಾಗುವುದು ಎಂದ ಅವರು, ಸಮಸ್ತ ಸ್ವಯಂ ಸೇವಾ ಸಮುದಾಯಕ್ಕೆ ಶುಭಾಶಯ ಕೋರಿದರು. ಅಕ್ಟೋಬರ್ ೭ರಂದು ಆಚರಿಸುವ ಮಹರ್ಷಿ ವಾಲ್ಮಿಕಿ ಜಯಂತಿಯ ಕುರಿತು ಮಾತನಾಡಿದ ಅವರು, ರಾಮಾಯಣದ ಮೂಲಕ ಮನುಕುಲಕ್ಕೆ ಸೇವೆ, ಸಾಮರಸ್ಯ ಮತ್ತು ಕರುಣೆಯ ಸಂದೇಶ ನೀಡಿದ್ದಾರೆ ಎಂದು ತಿಳಿಸಿದರು. ೫೦ ವರ್ಷ ಪೂರೈಸುತ್ತಿರುವ ಪ್ಯಾರಿಸ್‌ನ ಸಾಂಸ್ಕೃತಿಕ ಸಂಸ್ಥೆ 'ಸೆಂಟರ್ ಮಂಟಪ' ಕುರಿತು ಪ್ರಸ್ತಾಪಿಸಿದ ಪ್ರಧಾನಿ ಭಾರತೀಯ ನೃತ್ಯ ಕಲೆಗಳನ್ನು ಜಾಗತಿಕ ಮಟ್ಟದಲ್ಲಿ ಈ ಸಂಸ್ಥೆ ಪ್ರಚುರಪಡಿಸುತ್ತಿದ್ದು, ಆ ಮೂಲಕ ಕೊಡುಗೆ ನೀಡುತ್ತಿದೆ. ಇದರ ಸಂಸ್ಥಾಪಕಿ ಮಿಲೆನಾ ಸಲ್ವಿನಿ ಅವರಿಗೆ ಕೆಲವು ವರ್ಷಗಳ ಹಿಂದೆ ಪದ್ಮಶ್ರೀ ಪ್ರಶಸ್ತಿ ನೀಡಿ ಗೌರವಿಸಲಾಗಿದೆ ಎಂದು ಸಂತಸ ವ್ಯಕ್ತಪಡಿಸಿದರು. ಅಸ್ಸಾಂನ

ಭೂಪೇಂದ್ರ ಅಜಾರಿಕ ಜನ್ಮ ಶತಮಾನೋತ್ಸವವನ್ನು ಸ್ಮರಿಸಿದ ಅವರು, ಇತ್ತೀಚೆಗೆ ನಿಧನರಾದ ಗಾಯಕ ಜುಬಿನ್ ಗರ್ಗ್ ಮತ್ತು ಕರ್ನಾಟಕದ ಮಹಾನ್ ವಿಚಾರವಾದಿ ಮತ್ತು ಚಿಂತಕ ಡಾ. ಎಸ್.ಎಲ್ ಭೈರಪ್ಪ ಅವರಿಗೆ ಗೌರವನಮನ ಸಲ್ಲಿಸಿದರು. ಬಳಿಕ, ಕೊನೆಯಲ್ಲಿ ದೀಪಾವಳಿ ಹಬ್ಬದ ಶುಭಾಶಯ ಕೋರಿದ ಅವರು, ಸ್ವದೇಶಿ ಉತ್ಪನ್ನಗಳ ಖರೀದಿಯ ಮೂಲಕವೇ ದೇಶವನ್ನು ಆತ್ಮ ನಿರ್ಭರವಾಗಿಸಲು ಸಾಧ್ಯ ಎಂದು ಪುನರುಚ್ಚರಿಸಿದರು.

<><><><>

ನವದೆಹಲಿಯ ದೀನ್ ದಯಾಳ್ ಉಪಾಧ್ಯಾಯ ಮಾರ್ಗದಲ್ಲಿರುವ ನೂತನ ದೆಹಲಿ ಬಿಜೆಪಿ ಕಾರ್ಯಾಲಯವನ್ನು ಪ್ರಧಾನಿ ನರೇಂದ್ರ ಮೋದಿ ನಾಳೆ ಉದ್ಘಾಟಿಸಲಿದ್ದಾರೆ.

<><><><>

ಮುಂದಿನ ವರ್ಷದ ಮಾರ್ಚ್ ೩೧ ವೇಳೆಗೆ ದೇಶದಿಂದ ಎಡಪಂಥೀಯ ಉಗ್ರವಾದವನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಲಾಗುವುದು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ. ನವದೆಹಲಿಯಲ್ಲಿ ಇಂದು ನಕ್ಸಲ್ ಮುಕ್ತ ಭಾರತ್ ಕಾರ್ಯಕ್ರಮದ ಸಮಾರೋಪ ಸಮಾವೇಶದಲ್ಲಿ ಮಾತನಾಡಿದ ಅವರು, ೨೦೧೪ ರಲ್ಲಿ ಪ್ರಧಾನಿ ನರೇಂದ್ರ ಮೋದಿ ಸರ್ಕಾರ ಅಧಿಕಾರಕ್ಕೆ ಬಂದಾಗ, ಭಾರತ, ಜಮ್ಮು-ಕಾಶ್ಮೀರ, ಈಶಾನ್ಯ ಪ್ರದೇಶ ಮತ್ತು ಹಿಂಸಾಚಾರ ಘಟನೆಗಳು ರಾಷ್ಟ್ರೀಯ ಭದ್ರತೆಯ ಮೇಲೆ ತೀವ್ರ ಪರಿಣಾಮ ಬೀರುತ್ತಿದ್ದ ಎಡಪಂಥೀಯ ಉಗ್ರವಾದ ಕಾರಿಡಾರ್ ಸೇರಿ ಒಟ್ಟು ಮೂರು ಪ್ರಮುಖ ಆಂತರಿಕ ಭದ್ರತಾ ತಾಣಗಳ ಸವಾಲನ್ನು ಎದುರಿಸಿತ್ತು. ಈ ಸವಾಲುಗಳನ್ನು ಎದುರಿಸಲು ಸರ್ಕಾರ ದೀರ್ಘಾವಧಿಯ ಕಾರ್ಯತಂತ್ರವನ್ನು ಅಳವಡಿಸಿಕೊಂಡಿದೆ ಎಂದರು.

<><><><>

ತಮಿಳುನಾಡಿನಲ್ಲಿ ನಿನ್ನೆ ನಡೆದ ತಮಿಳಗ ವೆಟ್ರಿ ಕಾಳಗಂ ಟಿವಿಕೆಯ ಸಾರ್ವಜನಿಕ ರ್‍ಯಾಲಿಯ ವೇಳೆ ೪೦ ಜನರ ಸಾವಿಗೆ ಕಾರಣವಾದ ಕಾಲ್ತುಳಿತ ಘಟನೆಯ ತನಿಖೆಗಾಗಿ ತಮಿಳುನಾಡು ಸರ್ಕಾರ, ಮಾಜಿ ಹೈಕೋರ್ಟ್ ನ್ಯಾಯಮೂರ್ತಿ ಜಸ್ಟೀಸ್ ಅರುಣಾ ಜಗದೀಸನ್ ಅವರ ನೇತೃತ್ವದಲ್ಲಿ ಏಕಸದಸ್ಯ ಆಯೋಗವನ್ನು ರಚಿಸಿದೆ. ವೈದ್ಯಕೀಯ ಶಿಕ್ಷಣ ನಿರ್ದೇಶಕರ ಪ್ರಕಾರ ೮೧ ಜನರು ಚಿಕಿತ್ಸೆ ಪಡೆಯುತ್ತಿದ್ದು, ಇಬ್ಬರು ಗಂಭೀರ ಸ್ಥಿತಿಯಲ್ಲಿದ್ದಾರೆ. ರಾಜಕೀಯ ನಾಯಕರು ಪಕ್ಷಾತೀತವಾಗಿ ಸಾವನ್ನಪ್ಪಿದವರಿಗೆ ಸಂತಾಪ ಸೂಚಿಸುತ್ತಿದ್ದು, ಗಾಯಗೊಂಡವರು ಶೀಘ್ರ

ಗುಣಮುಖರಾಗಲಿ ಎಂದು ಪ್ರಾರ್ಥಿಸುತ್ತಿದ್ದಾರೆ. ಮೃತದೇಹಗಳ ಗುರುತಿಸುವ ಪ್ರಕ್ರಿಯೆ ಪೂರ್ಣಗೊಂಡಿದ್ದು, ಅವುಗಳನ್ನು ಅವರ ಕುಟುಂಬಸ್ಥರಿಗೆ ಹಸ್ತಾಂತರಿಸಲಾಗಿದೆ ಎಂದು ನಮ್ಮ ಬಾತ್ಮೀದಾರರು ವರದಿ ಮಾಡಿದ್ದಾರೆ. ಈ ನಡುವೆ ಮದ್ರಾಸ್ ಹೈಕೋರ್ಟ್‌ನ ಮಧುರೈ ಪೀಠ ಸ್ವಯಂಪ್ರೇರಿತ ವಿಚಾರಣೆ ಕೈಗೆತ್ತಿಕೊಳ್ಳುವಂತೆ ಟಿವಿಕೆ ಪಕ್ಷ ಆಗ್ರಹಿಸಿದೆ. ಆದರೆ ನ್ಯಾಯಮೂರ್ತಿ ದಂಡಪಾಣಿ ಪಕ್ಷಕ್ಕೆ ನ್ಯಾಯಾಲಯದಲ್ಲಿ ಅಧಿಕೃತ ಅರ್ಜಿ ಸಲ್ಲಿಸುವಂತೆ ಸೂಚಿಸಿದರು. ನ್ಯಾಯಮೂರ್ತಿಗಳಾದ ದಂಡಪಾಣಿ ಮತ್ತು ಜೋತಿರಾಮನ್ ಅವರಿರುವ ಪೀಠ ನಾಳೆ ಮಧ್ಯಾಹ್ನ ೨ ಗಂಟೆ ಸುಮಾರಿಗೆ ಅರ್ಜಿಯನ್ನು ವಿಚಾರಣೆಗೆ ತೆಗೆದುಕೊಳ್ಳುವ ನಿರೀಕ್ಷೆಯಿದೆ.

<><><>

ವಿಶ್ವ ಫುಡ್ ಇಂಡಿಯಾ-೨೦೨೫ ನವದೆಹಲಿಯಲ್ಲಿಂದು ಸಂಪನ್ನಗೊಂಡಿದ್ದು, ಒಂದು ಲಕ್ಷ ಕೋಟಿ ರೂಪಾಯಿಗಳಿಗೂ ಹೆಚ್ಚಿನ ಮೊತ್ತದ ಹೂಡಿಕಾ ಒಪ್ಪಂದಗಳಿಗೆ ಸಾಕ್ಷಿಯಾಗಿದೆ. ಆ ಮೂಲಕ ಭಾರತದ ಆಹಾರ ಸಂಸ್ಕರಣಾ ವಲಯದ ಅತಿದೊಡ್ಡ ಘೋಷಣೆಗಳಲ್ಲೊಂದಾಗಿ ಈ ಕಾರ್ಯಕ್ರಮ ಹೊರ ಹೊಮ್ಮಿದೆ. ನಾಲ್ಕು ದಿನಗಳ ಕಾರ್ಯಕ್ರಮದಲ್ಲಿ ದೇಶೀಯ ಮತ್ತು ಅಂತಾರಾಷ್ಟ್ರೀಯ ಪ್ರಮುಖ ೨೬ ಕಂಪನಿಗಳು ಪರಸ್ಪರ ತಿಳಿವಳಿಕೆ ಒಪ್ಪಂದಕ್ಕೆ ಸಹಿ ಹಾಕಿವೆ.

<><><>

ಸಾರ್ವಜನಿಕ ಸೇವೆ ಮತ್ತು ಉತ್ತಮ ಆಡಳಿತದ ಧ್ಯೇಯದೊಂದಿಗೆ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ದೇಶದಲ್ಲಿ ಪರಿವರ್ತನೆ ಮತ್ತು ಪ್ರಗತಿಯನ್ನು ತರಲು ಅವಿರತವಾಗಿ ಶ್ರಮಿಸುತ್ತಿದೆ. ಈ ಹಿನ್ನೆಲೆಯಲ್ಲಿ ಆಕಾಶವಾಣಿ ಪ್ರಸ್ತುತಪಡಿಸುತ್ತಿರುವ ವಿಶೇಷ ಸರಣಿ - "ಸೇವಾ ಪರ್ವ" ದಲ್ಲಿಂದು, ಕೇಂದ್ರ ಸರ್ಕಾರ ಪಿಎಂ ಕಿಸಾನ್ ಸಮ್ಮಾನ್ ನಿಧಿ ಯೋಜನೆ ಮೂಲಕ ದೇಶದ ಕೃಷಿಕರನ್ನು ಯಾವ ರೀತಿ ಸಶಕ್ತಗೊಳಿಸಿದೆ ಎಂಬುದರ ಕುರಿತ ಒಂದು ವಿಶೇಷ ವರದಿ ಇದೀಗ ಮೂಡಿಬರಲಿದೆ.

ವರದಿ: ಶ್ರೀದೇವಿ (೪೫ ಸೆಕೆಂಡ್‌ಗಳು)

ಪಿಎಂ ಕಿಸಾನ್ ಯೋಜನೆ ದೇಶದ ಅತಿದೊಡ್ಡ ಕಲ್ಯಾಣ ಉಪಕ್ರಮಗಳಲ್ಲೊಂದಾಗಿದೆ. ಈ ಯೋಜನೆಯಡಿ ಪ್ರತಿ ೪ ತಿಂಗಳಿಗೊಮ್ಮೆ ರೈತರ ಖಾತೆಗಳಿಗೆ ನೇರವಾಗಿ ೨ ಸಾವಿರ ರೂಪಾಯಿಗಳನ್ನು ಜಮೆ ಮಾಡಲಾಗುತ್ತದೆ. ಈ ೬ ಸಾವಿರ ರೂಪಾಯಿಯ ವಾರ್ಷಿಕ ನೆರವು ರೈತರ ಆರ್ಥಿಕ ಹೊರೆಯನ್ನು ತಗ್ಗಿಸಿ ಅವರಿಗೆ ಗಮನಾರ್ಹ ಆರ್ಥಿಕ ಸಹಾಯ ನೀಡಿದೆ. ಈವರೆಗೆ

ಪಿಎಂ ಕಿಸಾನ್ ಯೋಜನೆಯಡಿ ೨೧ ಕಂತುಗಳಲ್ಲಿ ೩ ಲಕ್ಷದ ೯೦ ಸಾವಿರ ಕೋಟಿ ರೂಪಾಯಿಗಳಿಗೂ ಅಧಿಕ ಮೊತ್ತವನ್ನು ನೇರವಾಗಿ ರೈತರ ಖಾತೆಗಳಿಗೆ ಜಮೆ ಮಾಡಲಾಗಿದೆ. ಪಿಎಂ ಕಿಸಾನ್ ಯೋಜನೆ ಆಗಸದಲ್ಲಿರುವ ಮೋಡದಂತೆ ರೈತರ ಜೀವನದಲ್ಲಿ ಸಮೃದ್ಧಿಯ ಮಳೆಯನ್ನು ಹರಿಸುತ್ತಿದೆ. ಇದು ಅವರಿಗೆ ಉತ್ತಮ ಬೆಳೆ ಬೆಳೆಯಲು ಹಾಗೂ ಅವರ ಶ್ರಮದ ಮೂಲಕ ರಾಷ್ಟ್ರಕ್ಕೆ ಕೊಡುಗೆ ನೀಡಲು ಸಹಕರಿಸುತ್ತಿದೆ.

<><><><>

ಯುನೈಟೆಡ್ ಅರಬ್ ಎಮಿರೇಟ್ಸ್ ನಲ್ಲಿ ನಡೆಯುತ್ತಿರುವ ಏಷ್ಯಾ ಕಪ್ ಟಿ-೨೦ ಕ್ರಿಕೆಟ್ ಪಂದ್ಯಾವಳಿಯ ಫೈನಲ್ ಪಂದ್ಯದಲ್ಲಿ ಇಂದು ಭಾರತ ಮತ್ತು ಪಾಕಿಸ್ತಾನ ತಂಡಗಳು ಮುಖಾಮುಖಿಯಾಗಲಿವೆ. ದುಬೈ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆಯಲಿರುವ ಈ ಪಂದ್ಯ ಭಾರತೀಯ ಕಾಲಮಾನ ರಾತ್ರಿ ೮ಕ್ಕೆ ಆರಂಭವಾಗಲಿದೆ. ಸಾಂಪ್ರದಾಯಿಕ ಎದುರಾಳಿಗಳಾದ ಭಾರತ ಮತ್ತು ಪಾಕಿಸ್ತಾನ ತಂಡಗಳು ೪೧ ವರ್ಷಗಳ ಏಷ್ಯಾಕಪ್ ಕ್ರಿಕೆಟ್ ಪಂದ್ಯಾವಳಿಯ ಫೈನಲ್‌ನಲ್ಲಿ ಇದೇ ಮೊದಲ ಬಾರಿ ಎದುರಾಗುತ್ತಿವೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>